ತಾರೀಖು 20ನೆ ಆಗಸ್ಟು 1907.

ನಂ. ರೆ. 1482—ಲ್ಯಾ. ರೆ. 90-07—3, 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಶನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ನ್ಯಾಮತಿ ಊರಿನ ನಿವಾಸಿಗಳು ಗೊಬ್ಬರವನ್ನು ಕುಪ್ಪೆ ಹಾಕುವುದಕ್ಕೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಹೊನ್ನಾಳಿ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ಅಥವಾ ಜಾತೀದಾರನ ಹೆಸರು	ಸರ್ವೆ ನಂ.	ಖುಷ್ಕಿ ಅಥವಾ ಬಾಗಾಯಿತು	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಚತುರ್ಗಡಿ.			
							ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಚನ್ನಗಿರಿ ಹೊನ್ನಾಳಿ	ಬೆಳಗುತ್ತಿ	ನ್ಯಾಮತಿ	ಕೀನಪ್ಪ	127	ಖುಷ್ಕಿ ...	ಎ. ಗು. 2 2	ಸರ್ವೆ ನಂಬರು 125 ಕೋಡಿಕೊಪ್ಪನವರಿಂದ ಬರುವ ರಸ್ತೆ		ಕರಿಹಳ್ಳ	ಕೋಡಿಕೊಪ್ಪ

ಹುಕುಂ ಬವೋಜೇಬ್,
ಸಿ. ಎಸ್. ಬಾ. ಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಮಿಲಿಟರಿ.

ಇನ್ಸಿ ಹಾರ್ನಾಮೆ.

ತಾರೀಖು 28ನೆ ಆಗಸ್ಟು 1907.

ನಂ. 708-10, ಮೈಸೂರು ಸೀಮೆಯ ಘನವನ್ನೆ ಬೃದಿದ ಶ್ರೀಮಂತ ಮಹಾರಾಜರವರು ಮೈಸೂರು ಇಂಪೀರಿಯಲ್ ಸರ್ವಿಸ್ ರಿಜಿಮೆಂಟಿನಲ್ಲಿ ಈ ಕೆಳಗೆ ಕಂಡ ಟಿಡ್ಡಿಗಳನ್ನು 1907ನೆ ಇಸವಿ ಏಪ್ರಿಲ್ 15ನೆ ತಾರೀಖು ಲಾಗಾಯಿತು ಮಂಜೂರ್ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ	ಯಾವ ದರ್ಜೆಗೆ
1. ಮಹಮದ್ ನಸೀರ್ ಅಹಮದ್ ...	ಜಮೂದಾರ್ 4ನೆ ಗ್ರೇಡ್ ...	ಜಮೂದಾರ್ 3ನೆ ಗ್ರೇಡ್.
2. ಸೈಯದ್ ಅಬ್ದುಲ್ ರಜಾಕ್ ...	ಜಮೂದಾರ್ 5ನೆ ಗ್ರೇಡ್ ...	ಜಮೂದಾರ್ 4ನೆ ಗ್ರೇಡ್.

ಹುಕುಂ ಬವೋಜೇಬ್,
ಆರ್. ಜಿ. ಜೋನ್ಸ್, ಲೆಫ್ಟ್ಯಿನೆಂಟ್ ಕರ್ನಲ್,
ಮಿಲಿಟರಿ ಅಸಿಸ್ಟೆಂಟ್.

ಪಬ್ಲಿಕ್ ವರ್ಕ್ಸ್.

ಇನ್ಸಿ ಹಾರ್ನಾಮೆ.

ತಾರೀಖು 24ನೆ ಆಗಸ್ಟು 1907.

ನಂ. 805—6036, ಸಬ್ ಅಸಿಸ್ಟೆಂಟ್ ಇಂಜನಿಯರ್ ವೆ॥ ಕೆ. ಎಂ. ವಾಸುದೇವರಾವ್ ಯವರಿಗೆ ಸ್ಯ 1907ನೆ ಆಗಸ್ಟು 2ನೆ ತಾರೀಖು ಲಾಗಾಯಿತು ಕೊಟ್ಟಿದ್ದ 15 ದಿನಗಳ ಪ್ರಿವಿಲೇಜ್ ರಜಾದಲ್ಲಿ ಕೊಂಚ ದಿನಗಳು, ಉಪಯೋಗಿಸಿಕೊಂಡು 12ನೆ ತಾರೀಖಿನ ಮಧ್ಯಾಹ್ನ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗ ಮಾಡಿಕೊಳ್ಳದ ರಜವನ್ನ ವಜಾ ಮಾಡಲ್ಪಟ್ಟಿದೆ.

ತಾರೀಖು 26ನೆ ಆಗಸ್ಟು 1907ನೆ ಇಸವಿ.

ನಂ. 814—6078, ಸ್ಪೆಷಲ್ ಡ್ಯೂಟಿ ಡಿವಿಜ್ ಎಗ್ಸಿಕ್ಯೂಟೀವ್ ಇಂಜನಿಯರ್ ವೆ॥ ವಿ. ಹೆಚ್. ಕರ್ವಿ, ಎಲ್. ಸಿ. ಇ., ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್ 177ನೆ ಆರ್ಟಿಕಲ್ ಮೇರಿಗೆ ಇದೇ ತಿಂಗಳು 10ನೆ ತಾರೀಖಿನಾರಭ್ಯ ಒಂದು ತಿಂಗಳು ಪ್ರಿವಿಲೇಜ್ ರಜಾ ಮಂಜೂರು ಮಾಡಲ್ಪಟ್ಟಿರುತ್ತೆ.

ಬೆಂಗಳೂರು, ತಾರೀಖು 27ನೆ ಆಗಸ್ಟು 1907ನೆ ಇಸವಿ.

ನಂ. 815—6100, ಅಸಿಸ್ಟೆಂಟ್ ಇಂಜನಿಯರ್ ವೆ॥ ಕೆ. ಅನಂತಾಚಾರ್ಯ್ಯ, ಎಲ್. ಸಿ. ಇ., ಯವರಿಗೆ ಇದೇ ಇಸವಿ ಜುಲೈ 17ನೆ ತಾರೀಖಿನ 645—5073ನೆ ನಂಬರು ಇನ್ಸಿ ಹಾರ್ನಾಮೆಯಲ್ಲಿ ಕೊಡಲ್ಪಟ್ಟ ಒಂದೂವರೇ ತಿಂಗಳು ಪ್ರಿವಿಲೇಜ್ ರಜಾವನ್ನ ಇನ್ನು ಇಪ್ಪತ್ತು ದಿವಸಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ಬೆಂಗಳೂರು, ತಾರೀಖು 28ನೆ ಆಗಸ್ಟ್ 1907ನೆ ಇಸವಿ.

ನಂ. 820-6136, ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖಾ 1ನೆ ಗ್ರೇಡ್ ಸೂಪರವೈಜರು ವೆ॥ ಎಸ್. ಕೆ. ನರಸಿಹ್ಮಯ್ಯಂಗಾರ್ ಯವರಿಗೆ ಆನರರಿ ಅಸಿಸ್ಟೆಂಟ್ ಇಂಜನಿಯರ್ ಎಂಬ ಗೌರವ ಪದವಿಯನ್ನೆ, ಶ್ರೀಮಂ ಮಹಿಸೂರು ಮಹಾರಾಜಾ ಸರ್ಕಾರದವರು ದಯಪಾಲಿಸಿರುತ್ತಾರೆ.

ಹುಕುಂ ಬವೋಜೇಬ್,
ಬರ್ನಾರ್ಡಾಸ್, ಕ್ಯಾಪ್ಟನ್, ಆರ್. ಇ.,
ಮೈಸೂರು ಗವರ್ನಮೆಂಟ್ ಪಬ್ಲಿಕ್ ವರ್ಕ್ಸ್ ಇಲಾಖಾ ಅಂಡರ್ ಸೆಕ್ರೆಟರಿ.